ಟಿ.ಎಂ. ಮಾನಪ್ಪ, ಶಿವಮೊಗ್ಗ
ಮೀನುಗಳು ಏಕೆ ನಿದ್ರೆ ಮಾಡುವುದಿಲ್ಲ?



ಮೀನ್ ಮೆಂಟಾಲಿಟಿಯವರು ಹಿಡಿದುಬಿಟ್ಟಾರೆಂಬ ಭಯಕ್ಕೆ.

ವ. ಉಮೇಶ ಕಾರಂತ, ಮಂಗಳೂರು
ಮುಳ್ಳಿನಿಂದಲೇ ಮುಳ್ಳನ್ನು ತೆಗೆಯಬೇಕೇ?
ಹಾಗೇನಿಲ್ಲ. ಗಡಿಯಾರ ರಿಪೇರಿಯವರು ಬೇರೆಯದನ್ನೂ ಬಳಸುತ್ತಾರೆ.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಕೈ ಕೆರೆತ ಆದರೆ ಏನು ಸಂಕೇತ?
ಮೌಸ್‌ಪ್ಯಾಡ್ ಧೂಳಾಗಿದೆ, ಒರೆಸಬೇಕು ಎಂದು.

ಬಿ.ಆರ್. ಉಷಾ, ಬೆಂಗಳೂರು
ರಾಜಕಾರಣಿಗಳಿಗೆ 2 ಗಂಟೆ ಪೊಲೀಸ್ ಕಾವಲು. ನಮಗೆ?
ನಿರುಪದ್ರವಿಗಳಿಗೆ ಕಾವಲಿನ ಅಗತ್ಯವಿಲ್ಲ.

ತಿಮ್ಮರಾಜು, ದಾವಣಗೆರೆ
ಮಂತ್ರಿಯಾಗಲು ಯಾವ ಡಿಗ್ರಿ ಬೇಕು ರಾಮ್‌ಜೀ?



ಕೆಲವರಿಗಂತೂ ಜೈಲಿನಲ್ಲಿ ಪೊಲೀಸರ ಕೈಲಿ ಥರ್ಡ್ ಡಿಗ್ರಿ ಆಗಿರಬೇಕಂತೆ.

ಅಲ್ಲಾಬಕಷ್, ಮಧುಗಿರಿ
ಕೊರೊನಾ ಲಸಿಕೆ ಮನುಷ್ಯರಿಗೆ ಮಾತ್ರ ನೀಡಿದರೆ ಸಾಕೆ? ಪ್ರಾಣಿಗಳಿಗೆ?
ಪ್ರಾಣಿಗಳಿಗೂ ಕೊಡುತ್ತಾರೆ. ಅಂತಹ ಹಲವು ಕಂತ್ರಿಗಳು ಚುಚ್ಚಿಸಿಕೊಂಡಿದ್ದಾರಲ್ಲ!

ಎನ್. ವೈದೇಹಿ, ಮೈಸೂರು
ಹೆಣ್ಣಿನ ಕಣ್ಣೀರಿಗೂ, ಸಮುದ್ರದ ನೀರಿಗೂ ವ್ಯತ್ಯಾಸವೇನು ಸರ್?
ಸಮುದ್ರದ ನೀರಿನಲ್ಲಿ ಲವಣ ಇರುತ್ತದೆ, ಹೆಣ್ಣಿನ ಕಣ್ಣೀರಿನಲ್ಲಿ ಲವ್, ರಣ ಎರಡೂ ಇರುತ್ತವೆ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
ಒಬ್ಬ ಹೆಂಗಸಿಗೆ ಏಳು ತಿಂಗಳ ಮಗು ಮತ್ತು ಮೂರು ತಿಂಗಳ ಮಗು ಇರಲು ಸಾಧ್ಯವೆ?
ಸಾಧ್ಯ. ಹೆತ್ತು ಒಂದು, ದತ್ತು ಒಂದು!

ಅನಸೂಯ ಟಿ, ಕೇದಿಗೆಮನೆ
ತಮಗೆ ಯಾವ ರೀತಿಯ ಪ್ರಶ್ನೆ ಉತ್ತರಿಸಲು ಸುಲಭ?
ತಮಗೆ ಯಾವ ರೀತಿಯ ಪ್ರಶ್ನೆ ಕೇಳಲು ಸುಲಭವೋ ಆ ತರಹದ್ದೇ.

ಎ.ಎಚ್. ಪ್ರಸನ್ನ ಗಣಪತಿ, ಬೆಂಗಳೂರು
ಇರುವ ಅಲ್ಪಸಂಖ್ಯಾತ ಬ್ರಾಹ್ಮಣರನ್ನು ಕುರಿತು ಮಾತನಾಡಲು ಅಮೆರಿಕದ ಬುದ್ಧಿಜೀವಿ ಬೇಕಾಗಿತ್ತೆ?
ಎಲ್ಲಿಯವನಾದರೇನು! ಬ್ರಾಹ್ಮಣ, ದೇವರು, ಹಿಂದುತ್ವ ಬೈಯುವುದು ಬುದ್ಧಿಜೀವಿಯ ಗ್ಲೋಬಲ್ ಸಿಲಬಸ್.

ಎಚ್.ಆರ್. ವಸ್ತ್ರದ, ಧಾರವಾಡ
ಕೊರೊನಾ 1, 2ನೇ ಅಲೆಯಲ್ಲಿ ಯಡಿಯೂರಪ್ಪ. 3ನೇ ಅಲೆಯಲ್ಲಿ ಬೊಮ್ಮಾಯಿ. 4ನೇ ಅಲೆ ಇದ್ದರೆ?
ಕುಮಾರಸ್ವಾಮಿ! ಕೈಯೇ ಆಗಲಿ, ಕಮಲವೇ ಆಗಲಿ, ಕಂಟಕ ಬಂದಾಗ ಜೆಡಿಎಸ್ ರಮಣ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಜನ ಸಂಪಾದನೆ, ಧನ ಸಂಪಾದನೆ; ಇವೆರಡರಲ್ಲಿ ನಿಮ್ಮ ಮತ?
ಮತ ಎಂದರೆ ವೋಟು. ವೋಟಿಗೆ ಬೇಕಾದ್ದು ಧನಕ್ಕೆ ದೊರಕುವ ಜನ.

ಪುಷ್ಪಾ ಶ್ರೀರಾಮ
ಶ್ರೀರಾಮ, ಭೀಮರ ಸದ್ಗುಣವುಳ್ಳ ಏಕವ್ಯಕ್ತಿಯನ್ನು ನೀವೆಲ್ಲಾದರೂ ಕಂಡಿರುವಿರಾ?
ಹನುಮನೇ ಇದ್ದನಲ್ಲ– ಅವನ ಎದೆಯಲ್ಲಿ ರಾಮ, ತೋಳ್ಬಲ, ಸೇವಾಧರ್ಮದಲ್ಲಿ ಭೀಮ.

ಮೋಹನರಾಜು ಎಸ್.ಎ. ಶಂಕರಘಟ್ಟ
ಚೂಟಿ, ನಾಟಿ, ಘಾಟಿ... ಈ ಪದಗಳು ಯಾರಿಗೆ ಹೆಚ್ಚು ಅನ್ವಯಿಸುತ್ತವೆ?
ಹತ್ತರಲ್ಲಿ ಕ್ಯೂಟಿ, ಇಪ್ಪತ್ತರಲ್ಲಿ ತುಂಟಿ, ಮೂವತ್ತರಲ್ಲಿ ಆಂಟಿ ಆದವಳಿಗೆ.

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ
ಗಾಂಧಾರಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದಕ್ಕೇ ಅವಳ ಮಕ್ಕಳು ಹಾಗಾದರೇನು?
ಕೈಕಸಿ ಕಣ್ಣುಪಟ್ಟಿ ಕಟ್ಟಿಕೊಂಡಿದ್ದಳೆ? ರಾಜ್ಯದಾಹದ ಪರದೆ ಕೌರವರ ಕಣ್ಣು ಮುಚ್ಚಿದ್ದರಿಂದ ಹಾಗಾದರು.

ಬಿ. ಚಂದ್ರೇಗೌಡ, ಬೆಂಗಳೂರು
ಕರ್ಣ ಪಾಂಡವರ ಪಕ್ಷಪಾತಿಯಾಗಿದ್ದರೆ ಕುರುಕ್ಷೇತ್ರ ಯುದ್ಧ ನಡೆಯುತ್ತಿತ್ತೆ?
ಕೃಷ್ಣ ಧರ್ಮದ ಪಕ್ಷಪಾತಿ ಆಗಿದ್ದರಿಂದ ಯಾರೆಲ್ಲಿದ್ದರೂ ಕೌರವನಾಶಕ್ಕೆ ಯುದ್ಧ ತಪ್ಪುತ್ತಿರಲಿಲ್ಲ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಇತ್ತೀಚೆಗೆ ಸೈನಿಕರಿಗೆ ದೇಶಪ್ರೇಮಕ್ಕಿಂತ ಹೆಂಡತಿಯ ಮೇಲೆ ವ್ಯಾಮೋಹ ಹೆಚ್ಚಲು ಕಾರಣವೇನು?
ವ್ಯಾಮೋಹವಲ್ಲ, ತರಬೇತಿ. ಸತಿ–ಮಾತೆಯರ ಜೊತೆಯಿದ್ದೂ ಜಯಿಸಿದರೆ ಎಂತಹ ಯುದ್ಧವನ್ನೂ ಗೆಲ್ಲಬಹುದಂತೆ.

ಅರುಣ್ ಕುಲಕರ್ಣಿ, ನರೇಗಲ್ಲ
ಮಡದಿಯ ಮಾತನ್ನು ಕೇಳುವುದರಿಂದ ಆಗುವ ಲಾಭಗಳಾವುವು ರಾಮ್?



ಹೊಟ್ಟೆ ತುಂಬ ಊಟ, ಕಣ್ತುಂಬ ನಿದ್ರೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಕೆಲವು ಸಂದರ್ಭಗಳಲ್ಲಿ ಪ್ರಾಮಾಣಿಕತೆಗೆ ಬೆಲೆಯೇ ಇರುವುದಿಲ್ಲವಲ್ಲ ಸಾರ್?
ಕೆಲವು ಸಂದರ್ಭಗಳಲ್ಲಿ ಯಾವುದಕ್ಕೂ ಬೆಲೆ ಇರದು– ಮರುಭೂಮಿಯಲ್ಲಿ ಹಸಿದವನಿಗೆ ನವರತ್ನಗಳೂ ಕಸ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ದೇವರ ಗುಡಿ ತೆರೆಯುವುದಕ್ಕೂ ಮುಂಚೆ ದಾರು ಅಂಗಡಿ ಬಾಗಿಲು ತೆರೆದರಲ್ಲ, ದೇವ ಮೇಲೋ, ದಾರು ಮೇಲೋ?
ಸರಿಯೇ ಇದೆಯಲ್ಲ, ತಿಥಿಯ ನಂತರವೇ ಶುಭ ನಡೆಯುವುದು.

■ ರಾಮ್